**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬಂಗಾರಪೇಟೆ.</u>**

**<u>ಸಿ.ಸಿ ನಂ. 1869/2024</u>**

ಶ್ರೀ.ರಾಕೇಶ್ ಬಾಬು.ಎನ್. -- ದೂರುದಾರರು

**-ವಿರುದ್ಧ-**

ಶ್ರೀ.ಯೇಸುಪಾತಂ -- ಆರೋಪಿತರು

**<u>ದಂ.ಪ್ರ.ಸಂ.ಕಲಂ-313 ರಡಿ ಆರೋಪಿ ಹೇಳಿಕೆ</u>**

ಪ್ರಶ್ನೆಃ 1- ಈ ಕೇಸಿನಲ್ಲಿ ದೂರುದಾರರು ಹೇಳಿರುವ ಸಾಕ್ಷ್ಯವನ್ನು ಕೇಳಿ ತಿಳಿದುಕೊಂಡಿರುವಿರಾ ?

ಉತ್ತರಃ -

ಪ್ರಶ್ನೆಃ 2- ಫ್ರಾಸಾ-1 ರಾಕೇಶ್ ಬಾಬು.ಎನ್., ರವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ - ಆರೋಪಿಯಾದ ನೀವು ಮತ್ತು ಪಿರ್ಯಾದುದಾರರು ಚಿರಪರಿಚಿತರಿದ್ದು, ಅದರ ಆಧಾರದ ಮೇಲೆ ಆರೋಪಿಯಾದ ನೀವು ತುರ್ತು ಸಾಂಸಾರಿಕ ಹಾಗೂ ಕಾನೂನ್ಮಾತ್ಮಕ ಅವಶ್ಯಕತೆಗಳಿಗಾಗಿ ಪಿರ್ಯಾದುದಾರರಿಂದ ನೀವು -2024 ರ ಜನವರಿ ತಿಂಗಳ ಎರಡನೇ ವಾರದಂದು ರೂ.6,00,000/- (ರೂ.ಆರು ಲಕ್ಷ ಮಾತ್ರ) ಗಳನ್ನು 3 ತಿಂಗಳೊಳಗಾಗಿ ಮರುಪಾವತಿ ಮಾಡುವುದಾಗಿ ಹೇಳಿ ಕೈ ಸಾಲವಾಗಿ ಪಡೆದಿದ್ದು, ಅದನ್ನು ಮರು ಪಾವತಿ ಮಾಡುವ ಸಲುವಾಗಿ ಆರೋಪಿಯಾದ ನೀವು ದಿನಾಂಕಃ 21.03.2024 ರಂದು ಬಂಧನ್ ಬ್ಯಾಂಕ್, ಬಂಗಾರಪೇಟೆ ಶಾಖೆಯ ದಿನಾಂಕಃ 21.03.2024 ರ ಚೆಕ್ ನಂಬರ್ 000014 ಅನ್ನು ರೂ.6,00,000/- (ರೂ.ಆರು ಲಕ್ಷ ಮಾತ್ರ) ಗಳ ಮೊತ್ತಕ್ಕೆ ಪಿರ್ಯಾದುದಾರರಿಗೆ ಕೊಟ್ಟಿದ್ದು, ಅಂತಾ ಅವರು ಹೇಳುತ್ತಾರೆ ಇದಕ್ಕೆ ನೀವೇನು ಹೇಳುತ್ತೀರಿ ?

ಉತ್ತರಃ -

ಪ್ರಶ್ನೆಃ 3– ಫ್ರಾಸಾ–1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ – ಸದರಿ ಚೆಕ್ ನ್ನು ಪಿರ್ಯಾದುದಾರರು ದಿನಾಂಕಃ 21.03.2024 ರಂದು ನಗಧೀಕರಣಕ್ಕಾಗಿ ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಬಂಗಾರಪೇಟೆ ಶಾಖೆಯಲ್ಲಿ ಸಲ್ಲಿಸಿದಾಗ, **"No Such Account"** ಎಂಬ ದಿನಾಂಕಃ 26.03.2024 ರಂದು ಹಿಂಬರಹದೊಂದಿಗೆ ವಾಪಸ್ಸಾಗಿರುತ್ತದೆ, ಆ ಬಗ್ಗೆ ಪಿರ್ಯಾದುದಾರರು ಆರೋಪಿಯಾದ ನಿಮಗೆ ದಿನಾಂಕಃ27.03.2024 ರಂದು ನೋಟೀಸ್ ನೀಡಿದ್ದು ಸದರಿ ನೋಟೀಸ್‌ನ್ನು ನೀವು ದಿನಾಂಕ 28.03.2024 ರಂದು ಸ್ವೀಕರಿಸಿದ್ದು ಹಾಗೂ ನೀವು ಚೆಕ್ ನ ಮೊತ್ತವನ್ನು ಪಾವತಿಸಿರುವುದಿಲ್ಲ. ಆ ಕಾರಣ ಆರೋಪಿಯಾದ ನೀವು ಉದ್ದೇಶಪೂರ್ವಕವಾಗಿ ಪಿರ್ಯಾದುದಾರರಿಗೆ ಹಣವನ್ನು ಕೊಡದೆ, ಚೆಕ್ ಅನ್ನು ನೀಡಿದ್ದು, ಸದರಿ ಚೆಕ್ ಬ್ಯಾಂಕ್‌ನಿಂದ ನಗದೀಕರಣಗೊಳ್ಳದೇ ಅಮಾನ್ಯಗೊಂಡಿರುತ್ತದೆ ಅಂತಾ ಅವರು ಹೇಳುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ –

ಪ್ರಶ್ನೆಃ 4– ಈ ಕೇಸಿನಲ್ಲಿ ನಿಮಗೆ ಇನ್ನೇನಾದರೂ ಹೇಳುವುದು ಇದೆಯಾ ?
ಉತ್ತರಃ

ಪ್ರಶ್ನೆಃ 5– ಈ ಕೇಸಿನಲ್ಲಿ ನಿಮ್ಮ ಪರವಾಗಿ ಸಾಕ್ಷಿ ಮಾಡಿಸುವಿರಾ ?
ಉತ್ತರಃ

ಓ ಹೇ ಕೇ ಸರಿ ಇದೆ

**ಸಹಿ/–**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,**

**ಬಂಗಾರಪೇಟೆ.**

(313ರ ಅಡಿಯಲ್ಲಿ ಆಪಾದನೆಯನ್ನು ತಯಾರಿಸಿ ಆರೋಪಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ, ಹೇಳಿ ಆತನ ಸಹಿ ಪಡೆಯಲಾಗಿದೆ ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ)

**ಸಹಿ**/-

**ದಿನಾಂಕಃ** 18.09.2025. **ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,**

ಬಂಗಾರಪೇಟೆ.